# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 19-03-2021 ಪ್ರಶ್ನೆ ಸಂಖ್ಯೆ : 1444 (1803)

0ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾ.ದ ದಿನಾಂಕ : 19-03-2021

ಉತ್ತರಿಸುವ ಸಚಿವರು: ಮಾನ್ಯ ಕೃಷಿ ಸಚಿವರು

ವಿಷಯ : ಜಲಾನಯನ ಇಲಾಖೆಯಡಿ FPO ಗಳ ಬಗ್ಗೆ

(ಅ) ಜಲಾನಯನ ಇಲಾಖೆಯನ್ನು ಯಾವಾಗ ಸ್ಥಾಪನೆ ಮಾಡಲಾಯಿತು; ಇದರ ಧ್ಯೇಯೋದ್ದೇಶಗಳೇನು; ಇದರ ವ್ಯಾಪ್ತಿಯಲ್ಲಿ ಬರುವ ನಿಗಮ, ಮಂಡಳಿ, ಇತರೆ ಅಂಗ ಸಂಸ್ಥೆಗಳಾವುವು ; (ವಿವರವಾದ ಮಾಹಿತಿ ಕೊಡುವುದು)

(ಆ) ಕಳೆದ 5 ವರ್ಷಗಳಿಂದ ಜಲಾನಯನ ಇಲಾಖೆ ಹಾಗೂ ಇದರ ವ್ಯಾಪ್ತಿಯಲ್ಲಿ ಬರುವ ನಿಗಮ, ಮಂಡಳಿ, ಇತರೆ ಅಂಗ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಇತರೆ ಕಡೆಗಳಿಂದ ಎಷ್ಟು ಹಣ ಬಂದಿದೆ ; ಖರ್ಚಾಗಿರುವ ಹಣವೆಷ್ಟು ; ಹಾಗೂ ಉಳಿದಿರುವ ಹಣವೆಷ್ಟು ; (ವರ್ಷವಾರು ವಿವರವಾದ ಮಾಹಿತಿ ಕೊಡುವುದು)

(ಇ) ಕಳೆದ 5 ವರ್ಷಗಳಲ್ಲಿ ಯಾವ ಯಾವ ಸಂಘ ಸಂಸ್ಥೆಗಳನ್ನು ನೋಂದಾವಣೆ ಮಾಡಿಕೊಳ್ಳಲಾಗಿದೆ; ಮತ್ತು ಇವುಗಳಡಿ ಯಾವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ ; (ವಿವರವಾದ ಮಾಹಿತಿ ಕೊಡುವುದು)

(ಈ) ರೈತ ಉತ್ಪಾದಕ ಸಂಘ ಎಂದರೇನು; ಇಲಾಖೆಯಡಿ ಎಷ್ಟು ಉತ್ಪಾದಕ ಸಂಘಗಳನ್ನು ನೋಂದಾವಣೆ ಮಾಡಲಾಗಿದೆ ; 3 ವರ್ಷಗಳಲ್ಲಿ ಈ ಸಂಘಗಳಿಗೆ ನೀಡಿರುವ ಅನುದಾನವೆಷ್ಟು; (ಮಾಹಿತಿ ನೀಡುವುದು)

(ಉ) ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಎಷ್ಟು ರೈತ ಉತ್ಪಾದಕ ಸಂಘಗಳಿವೆ; ಅವು ಯಾವುವು ; ಯಾವಾಗ ನೋಂದಣಿ ಮಾಡಲಾಗಿದೆ ; ನೋಂದಣಿ ಮಾಡಲು ಇರುವ ಮಾನದಂಡಗಳೇನು ? (ತಾಲ್ಲೂಕುವಾರು ಮಾಹಿತಿ ಕೊಡುವುದು)